ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ – ರಾಷ್ಟ್ರೀಯ ಹೆದ್ದಾರಿಗಳು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ರಾಷ್ಟ್ರೀಯ ಹೆದ್ದಾರಿ ವಿಭಾಗ,ಲೋಕೋಪಯೋಗಿ ಭವನ,
ಬಾಲರಾಜ್‌ಅರಸ್ ರಸ್ತೆ, ಶಿವಮೊಗ್ಗ.

ಇ ಮೇಲ್ : eenhdsmg@gmail.com

ಸಂಖ್ಯೆ:ಕಾಇಂ/ರಾಹೆವಿ/ಶಿ/ಸ.ಇಂ2/ರಾಹೆ 169ಎ/ಹೊರಗುತ್ತಿಗೆ/2025–26 |955 **ದಿನಾಂಕ:** 11/09/2025

" ಕಛೇರಿ ಜ್ಞಾಪನಾ ಪತ್ರ"

ವಿಷಯ: ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲವನ್ನು ಟೆಂಡರ್ ಮುಖಾಂತರ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ: 1) ಸರ್ಕಾರ ಆದೇಶ ಸಂಖ್ಯೆ:ಆಇ6:ಟಿ.ಎಸ್ ಪಿ 2018 ಬೆಂಗಳೂರು ದಿ:22–03–2019.
2) RO, MoRT&H, B'lore letter No: RW/BNG/GENL/LA/68/2019/498 Dated:06-06-2025.
3) Tender Notification No: EE/NHD/SMG/AE-2/LA/OUTSOURCE STAFF/NH-169A/NIT8/2025-26/757 Dtd:13-08-2025

****

ಪ್ರಸ್ತಾವನೆ:

1	ಟೆಂಡರ್ ಪ್ರಕಟಣೆ	EE/NHD/SMG/AE-2/LA/OUTSOURCE STAFF/NH-169A/NIT8/2025-26/757 Dtd:13-08-2025		
2	ಪಡೆಯಲು ಬಯಸುವ ಸೇವೆಗಳ ವಿವರ ಮತ್ತು ಸಂಖ್ಯೆ	1	Retd. Government Surveyor / Private Surveyor	1
		2	Retd. First Division Assistant/ Retd. Revenue Inspector	2
		3	Computer Operator	1
		4	D Group	1
3	ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	ದಿನಾಂಕ: 13–08–2025 ರಿಂದ 22–08–2025 4.00 ಗಂಟೆಯವರೆಗೆ		
4	ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರಸ್ತಾವನೆ ಸಲ್ಲಿಸುವ ಕೊನೆಯ ದಿನಾಂಕ ವೇಳೆ	ದಿನಾಂಕ:22–08–2025 4.00 ಗಂಟೆಯವರೆಗೆ		
5	ಟೆಂಡರ್ ಫಾರಂ ಭಾಗ ಎ ತೆರೆಯುವ ದಿನಾಂಕ ಮತ್ತು ವೇಳೆ	ಟೆಂಡರ್ ಫಾರಂ ಭಾಗ 'ಎ' ಸಲ್ಲಿಸಿರುವ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ದಿನಾಂಕ:25–08–2025 4.00 ಗಂಟೆ ನಂತರ		
6	ಟೆಂಡರ್‌ನಲ್ಲಿರುವ ಸಂಸ್ಥೆಗಳು ಪಾವತಿಸಬೇಕಾದ ಇ.ಎಂ.ಡಿ	ರೂ.27,924/–		

ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಸಲ್ಲಿಸಿರುವ ಟೆಂಡರ್‌ನ್ನು ದಿನಾಂಕ:25–08–2025 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಈ ಕೆಳಗಿನ 3 ಏಜೆನ್ಸಿಯವರು ಭಾಗವಹಿಸಿರುತ್ತಾರೆ.

1) ಶ್ರೀ ವಿಜಯಕುಮಾರ್.ವಿ.ಎಸ್, (ಶ್ರೀಗಿರಿ ಸೆಕ್ಯೂರಿಟಿ ಏಜೆನ್ಸಿ)
2) ಡಾ॥ ಸುರೇಶ್ ಕೆ. ಬಾಳೆಗುಂಡಿ (ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯೂರೋ)
3) ಶ್ರೀಮತಿ ಎಸ್ ಮಮತಾ (ಅಖಿಲ ಎಂಟರ್‌ಪ್ರೈಸಸ್)

ಮೇಲಿನ ಟೆಂಡರಿನ ಇಎಂಡಿ ರೂ. 27,924/- ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಶುಲ್ಕ ರೂ.1000-00 ಅನ್ನು ಪರಿಶೀಲಿಸಿ, 3 ಏಜೆನ್ಸಿಗಳ ತಾಂತ್ರಿಕ ಬಿಡ್‌ಗಳನ್ನು ದಿನಾಂಕ:25-08-2025 ರಂದು ತೆರೆದು, ತಾಂತ್ರಿಕ ಬಿಡ್ ಅನ್ನು ಪರಿಶೀಲನೆ ಮಾಡಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

1) ಶ್ರೀ ವಿಜಯಕುಮಾರ್.ವಿ.ಎಸ್, (ಶ್ರೀಗಿರಿ ಸೆಕ್ಯೂರಿಟಿ ಏಜೆನ್ಸಿ):
ಈ ಏಜೆನ್ಸಿಯು ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ ಸದರಿಯವರು ಟೆಂಡರ್ ಫಾರಂ 'ಎ' ರಲ್ಲಿ ಕ್ರ.ಸಂ (18) (19) & (20) ರಲ್ಲಿ ಕೇಳಿರುವ ದಾಖಲೆಗಳಾದ **ESI ಬೇಬಾಕಿ ಪ್ರಮಾಣ ಪತ್ರ (No due certificate)** & **EPF ಬೇಬಾಕಿ ಪ್ರಮಾಣ ಪತ್ರ (No due certificate)** & **2024-25ನೇ ಸಾಲಿಗೆ ಸಹಾಯಕ ಕಾರ್ಮಿಕ ಆಯುಕ್ತರಿಂದ ಪಡೆದ (Non Conviction certificate) ಪ್ರಮಾಣ ಪತ್ರ** ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಕ್ರಮ ಸಂಖ್ಯೆ (21)ರಲ್ಲಿ ಕೇಳಿರುವ **ಬಿಡ್ದುದಾರರು ಶಿವಮೊಗ್ಗ ನಗರದಲ್ಲಿ ತಮ್ಮ ಕಛೇರಿ ಹೊಂದಿರುವ (ಬಾಡಿಗೆ/ಗುತ್ತಿಗೆ/ಸ್ವಂತ) ಕಟ್ಟಡದ ವಿಳಾಸ ಹಾಗೂ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಬದಲಿಗೆ ತಮ್ಮ ಸಂಸ್ಥೆಯು ಯಶಸ್ವಿ ಟೆಂಡರ್‌ದಾರರಾಗಿ ಆಯ್ಕೆಯಾದರೆ ಶಿವಮೊಗ್ಗ ನಗರದಲ್ಲಿ ತಮ್ಮ ಸಂಸ್ಥೆಯ ಕಛೇರಿಯನ್ನು ತೆರೆಯುತ್ತೇವೆ ಎಂದು ಮುಚ್ಚಳಿಕೆ ಪತ್ರವನ್ನು ನೀಡಿರುತ್ತಾರೆ.** ಆದಾಗ್ಯೂ ಸದರಿಯವರಿಗೆ ಈ ಕಛೇರಿಯಿಂದ ದಿನಾಂಕ:30-08-2025ರಂದು ಇ-ಮೇಲ್ ಮುಖಾಂತರ ಮೇಲ್ಕಂಡ ದಾಖಲೆಗಳನ್ನು ದಿನಾಂಕ:05-09-2025ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ ಸದರಿಯವರು ಇ-ಮೇಲ್‌ನಲ್ಲಿ ಕೇಳಲಾದ ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂಬ ಅಂಶವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

2) ಡಾ॥ ಸುರೇಶ್ ಕೆ. ಬಾಳೆಗುಂಡಿ (ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯೂರೋ):
ಈ ಏಜೆನ್ಸಿಯು ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಟೆಂಡರ್ ಫಾರಂ 'ಎ'ರಲ್ಲಿ ಕೇಳಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಕ್ರಮ ಸಂಖ್ಯೆ (18)ರಲ್ಲಿ **ಸಂಸ್ಥೆಯು ಯಾವುದೇ ಇಲಾಖೆಯಿಂದ ಕಪ್ಪುಪಟ್ಟಿಗೆ ಸೇರಿರುವುದಿಲ್ಲ ಎಂದು ರೂ.500-00 ಛಾಪಾ ಕಾಗಾದದಲ್ಲಿ ಪ್ರಮಾಣ ಪತ್ರ ಲಗತ್ತಿಸಲು ತಿಳಿಸಿದ್ದು, ಬದಲಿಗೆ ರೂ.100-00 ಛಾಪಾ ಕಾಗಾದದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಡಾ॥ ಸುರೇಶ್ ಕೆ. ಬಾಳೆಗುಂಡಿ (ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯೂರೋ) ಇವರ ತಾಂತ್ರಿಕ ಬಿಡ್ ಅನ್ನು ಪುರಸ್ಕರಿಸಬಹುದಾಗಿದೆ.**

3) ಶ್ರೀಮತಿ ಎಸ್ ಮಮತಾ (ಅಖಿಲ ಎಂಟರ್‌ಪ್ರೈಸಸ್) :
ಈ ಏಜೆನ್ಸಿಯು ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಟೆಂಡರ್ ಫಾರಂ 'ಎ'ರಲ್ಲಿ ಕೇಳಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಕ್ರಮ ಸಂಖ್ಯೆ (18)ರಲ್ಲಿ **ಸಂಸ್ಥೆಯು ಯಾವುದೇ ಇಲಾಖೆಯಿಂದ ಕಪ್ಪುಪಟ್ಟಿಗೆ ಸೇರಿರುವುದಿಲ್ಲ ಎಂದು ರೂ.500-00 ಛಾಪಾ ಕಾಗಾದದಲ್ಲಿ ಪ್ರಮಾಣ ಪತ್ರ ಲಗತ್ತಿಸಲು ತಿಳಿಸಿದ್ದು, ಬದಲಿಗೆ ರೂ.100-00 ಛಾಪಾ ಕಾಗಾದದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಶ್ರೀಮತಿ ಎಸ್ ಮಮತಾ (ಅಖಿಲ ಎಂಟರ್‌ಪ್ರೈಸಸ್) ಇವರ ತಾಂತ್ರಿಕ ಬಿಡ್ ಅನ್ನು ಪುರಸ್ಕರಿಸಬಹುದಾಗಿದೆ.**

ಆದೇಶ:

Engagement of supporting staff in the Office of the Assistant Commissioner/CALA Kundapura through placement agency in the Project of "Widening to 4 lane from Km 51.600 to 76.200 (Hebri to Parkala) and from km 85.200 To 88.900 (Karavali Junction to Malpe) of Thirthahalli-Udupi-Malpe Section of NH-169A in the State of Karnataka on EPC mode (Job No. NH-169A-KNT-2021-22- 927)"for the period of 01-12-2024 to 30-11-2025ರ ಅವಧಿಗೆ ನೌಕರರ ಸೇವೆಯನ್ನು ಒದಗಿಸಲು ತಾಂತ್ರಿಕ ಅರ್ಹತೆ ಹೊಂದಿರುವ ಮೂರು ಬಿಡ್‌ಗಳನ್ನು ಅನುಮೋದಿಸಿ ಮೇಲ್ಕಂಡ ಮೂರು ಆರ್ಥಿಕ ಬಿಡ್‌ಗಳನ್ನು ತೆರೆಯಲು ಆದೇಶ ನೀಡಿದೆ.

10/9/25

ಕಾರ್ಯಪಾಲಕ ಇಂಜಿನಿಯರ್
ರಾಷ್ಟ್ರೀಯ ಹೆದ್ದಾರಿ ವಿಭಾಗ
ಶಿವಮೊಗ್ಗ

Signature Not Verified
Digitally signed by LOKESH G
Date: 2025.09.12 15:58:55 IST
Location: eProcure-EPROC